

بسم اللهِ الرّحمٰن الرّحيم

# ಏಕದೇವತ್ವದ ಹಿನ್ನೆಲೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ವಿಶ್ವಾಸವರ್ಧಕ ವಿವರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–03–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಎರಡು ಜುಮಾಗಳ ಮುಂಚೆ ನಾನು ಹಝ್ರತ್ ಪೈಗಂಬರ್(ಸ)ರ ಜೀವನದ ಒಂದು ಆಯಾಮವಾದ ತೌಹೀದ್ (ಏಕದೇವೋಪಾಸನೆ) ಕಡೆಗಿನ ಅವರ ತುಡಿತದ ಬಗ್ಗೆ ಪ್ರಸ್ತಾಪಿಸಿದ್ದೆ. ಈ ಉದ್ದೇಶದ ಸ್ಥಾಪನೆಗಾಗಿ ಹಝ್ರತ್ ಪೈಗಂಬರ್(ಸ) ಆಗಮಿಸಿದ್ದರು. ಇದಕ್ಕಾಗಿ ಅವರಿಗೆ ಇದ್ದ ಕಾತರ ಅವರ ಮಾತು ಮತ್ತು ಕೃತಿಗಳಿಂದ ವ್ಯಕ್ತವಾಗುತ್ತಿತ್ತು. ಅಷ್ಟು ಮಾತ್ರವಲ್ಲ, ಅವರು ತಮ್ಮ ಸಹಾಬಿಯರಲ್ಲಿ, ತಮ್ಮ ಅನುಯಾಯಿಗಳಲ್ಲಿ ತೌಹೀದ್‌ಗಾಗಿ ಯಾವುದೇ ತ್ಯಾಗ ಮಾಡಲು ಸಿದ್ಧರಿರಲಿಕ್ಕಾಗಿ ಎಂತಹ ಉತ್ಸಾಹವನ್ನು ತುಂಬಿದರೆಂದರೆ, ಅದಕ್ಕೆ ಬೇರೆ ಯಾವುದೇ ಉದಾಹರಣೆ ಸಿಗುವುದಿಲ್ಲ.

ಇಂದು ಸಹ ನಾನು ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಇದೇ ಆಯಾಮವನ್ನು ಪ್ರಸ್ತಾಪಿಸುತ್ತೇನೆ ಮತ್ತು ಈ ಸಂಬಂಧಪಟ್ಟು ಕೆಲವು ಸಹಾಬಿಯರ ತ್ಯಾಗಗಳ ಪ್ರಸ್ತಾಪವೂ ಬರುವುದು.

ಒಮ್ಮೆ ಮುಶ್ರಿಕರು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಕೇಳಿದರು: 'ನೀವು ನಮ್ಮ ಆರಾಧ್ಯರ ಬಗ್ಗೆ ಇಂತಿಂತಹ ಮಾತುಗಳನ್ನು ಆಡುವುದಿಲ್ಲವೇ?'. ಅದಕ್ಕೆ ಉತ್ತರವಾಗಿ ಹಝ್ರತ್ ಪೈಗಂಬರ್(ಸ) 'ಹೌದು' ಎಂದರು. ಆಗ ಅವರು ಹಝ್ರತ್ ಪೈಗಂಬರ್(ಸ)ರ ಸುತ್ತಲೂ ಒಟ್ಟುಗೂಡಿದರು. ಆ ವೇಳೆ 'ನಿಮ್ಮ ಸ್ನೇಹಿತನ ಬಗ್ಗೆ ಹೋಗಿ ವಿಚಾರಿಸಿರಿ' ಎಂದು ಯಾರೋ ಹಝ್ರತ್ ಅಬೂಬಕರ್(ರ)ರೊಡನೆ ಹೇಳಿದರು. ಹಝ್ರತ್ ಅಬೂಬಕರ್(ರ) ಹೊರಟು ಮಸ್ಜಿದುಲ್‌ಹರಾಮ್‌ಗೆ ತಲುಪಿದರು. ಅಲ್ಲಿ ಜನರು ಹಝ್ರತ್ ಪೈಗಂಬರ್(ಸ)ರ ಸುತ್ತಲೂ ಜಮಾಯಿಸಿರುವುದನ್ನು ಅವರು ಕಂಡರು. ಹಝ್ರತ್ ಅಬೂಬಕರ್(ರ) ಕೇಳಿದರು: **'ಅತಖ್‌ತುಲೂನ ರಜುಲನ್ ಅಂಯ್ಯಕೂಲ ರಬ್ಬಿಯಲ್ಲಾಹು ವಖದ್ ಜಾಅಕುಮ್ ಬಿಲ್ ಬಯ್ಯಿನಾತಿ ಮಿರ್ರಬ್ಬಿಕುಮ್.'** – 'ನನ್ನ ಪ್ರಭು ಅಲ್ಲಾಹನು' ಎಂದು ಹೇಳಿದ್ದಕ್ಕಾಗಿ ನೀವು ಈ ವ್ಯಕ್ತಿಯನ್ನು ವಧಿಸುವಿರಾ? ಅವರಾದರೋ ನಿಮ್ಮ ಒಡೆಯನ ಕಡೆಯಿಂದ ಸ್ಪಷ್ಟವಾದ ಪುರಾವೆಗಳನ್ನು ನಿಮ್ಮ ಬಳಿ ತಂದಿದ್ದಾರೆ. ಆಗ ಅವರು ಹಝ್ರತ್ ಪೈಗಂಬರ್(ಸ)ರನ್ನು ಬಿಟ್ಟುಬಿಟ್ಟರು ಮತ್ತು ಹಝ್ರತ್ ಅಬೂಬಕರ್(ರ)ರ ಕಡೆಗೆ ಧುಮುಕಿ ಅವರನ್ನು ಹೊಡೆಯಲಾರಂಭಿಸಿದರು. ಹಝ್ರತ್ ಅಬೂಬಕರ್(ರ)ರ ಪುತ್ರಿ ಹೇಳುತ್ತಾರೆ: 'ಅವರು ನಮ್ಮ ಬಳಿ ಎಂತಹ ದುರ್ಬಲ ಸ್ಥಿತಿಯಲ್ಲಿ ಬಂದರೆಂದರೆ, ಅವರು ತಮ್ಮ ಕೂದಲನ್ನು ಮುಟ್ಟುವಾಗ ಕೂದಲು ಅವರ ಕೈಯೊಂದಿಗೆ ಕಿತ್ತು ಬರುತ್ತಿತ್ತು.'

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಮ್ಮೆ ಹಝ್ರತ್ ಪೈಗಂಬರ್(ಸ) ಮಾರುಕಟ್ಟೆಯಿಂದ ಹಾದುಹೋಗುತ್ತಿದ್ದರು, ಆಗ ಮಕ್ಕಾದ ಪೋಲಿಗಳ ಒಂದು ಗುಂಪು ಅವರನ್ನು ಸುತ್ತುವರೆದರು ಮತ್ತು ರಸ್ತೆಯುದ್ದಕ್ಕೂ, 'ಜನರೇ, ಇವನೇ ತಾನು ಪ್ರವಾದಿ ಎಂದು ಹೇಳಿಕೊಳ್ಳುವ ವ್ಯಕ್ತಿಯಾಗಿದ್ದಾನೆ' ಎಂದು ಹೇಳುತ್ತಾ ಹಝ್ರತ್ ಪೈಗಂಬರ್(ಸ)ರ ಕುತ್ತಿಗೆಗೆ ಹೊಡೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ)ರ ಮನೆಗೆ ಸುತ್ತಮುತ್ತಲಿನ ಮನೆಗಳಿಂದ ನಿರಂತರವಾಗಿ ಕಲ್ಲುಗಳನ್ನು ಎಸೆಯಲಾಗುತ್ತಿತ್ತು, ಅವರ ಮನೆಯಲ್ಲಿ ಹೊಲಸು ವಸ್ತುಗಳನ್ನು ಎಸೆಯಲಾಗುತ್ತಿತ್ತು. ಅಡುಗೆ ಮನೆಗೂ ಗಲೀಜು ವಸ್ತುಗಳನ್ನು ಎಸೆಯಲಾಗುತ್ತಿತ್ತು. ಆದರೆ ಹಝ್ರತ್ ಪೈಗಂಬರ್(ಸ) (ಅವರ ಮೇಲೆ ಸಾವಿರಾರು ಅನುಗ್ರಹ ವರ್ಷಿಸಲಿ), ಅವರು ತೌಹೀದ್‌ನ ಸ್ಥಾಪನೆಗಾಗಿ ಅವರ ಎದೆಯಲ್ಲಿ ಕುದಿಯುತ್ತಿದ್ದ ತುಡಿತವು ಎಂದಿಗೂ ಒಂದು ಕ್ಷಣಕ್ಕೂ ಕಡಿಮೆಯಾಗಲಿಲ್ಲ ಮತ್ತು ಈ ಎಲ್ಲ ಕಷ್ಟಗಳನ್ನು ಅವರು ಬಹಳ ಹರ್ಷದಿಂದ ಮತ್ತು ಸಂತೋಷದಿಂದ ಸ್ವೀಕರಿಸಿದರು. ಹಾಗಿದ್ದರೂ ಹಝ್ರತ್ ಪೈಗಂಬರ್(ಸ)ರಿಗೆ ಮಾನವಕುಲದೊಂದಿಗೆ ಇದ್ದ ಸಹಾನುಭೂತಿ ಮತ್ತು ಪ್ರೀತಿ ಎಳ್ಳಷ್ಟೂ ಕಡಿಮೆಯಾಗಲಿಲ್ಲ.

ಒಮ್ಮೆ ಹಝ್ರತ್ ಪೈಗಂಬರ್(ಸ) ಮಸ್ಜಿದುಲ್ ಹರಾಮ್‌ನಲ್ಲಿ ನಿಂತು ಮಕ್ಕಾದ ಮುಶ್ರಿಕರನ್ನು ಉದ್ದೇಶಿಸಿ ಹೀಗೆ ಹೇಳಿದರು: **"**ನೀವು **'ಲಾ ಇಲಾಹ ಇಲ್ಲಲ್ಲಾಹ್'** ಎಂದು ಹೇಳಿದರೆ ನೀವು ಯಶಸ್ವಿಯಾಗುವಿರಿ. ಅಂದರೆ, ಅಲ್ಲಾಹನನ್ನು ಹೊರತುಪಡಿಸಿ ಬೇರೆ ಯಾವ ಆರಾಧ್ಯನೂ ಇಲ್ಲ.**"** ಖುರೈಶಿಯರು ಹಝ್ರತ್ ಪೈಗಂಬರ್(ಸ)ರ ಮೇಲೆ ಮುಗಿಬಿದ್ದರು. ಆಗ ಹಾರಿಸ್ ಬಿನ್ ಅಬೀ ಹಾಲಾ(ರ) ಹಝ್ರತ್ ಪೈಗಂಬರ್(ಸ)ರ ರಕ್ಷಣೆಗಾಗಿ ಅವರ ಬಳಿಗೆ ತಲುಪಿದರು. ಹಝ್ರತ್ ಪೈಗಂಬರ್(ಸ)ರನ್ನು ರಕ್ಷಿಸಲು ಹಾರಿಸ್(ರ) ಆ ಜನರೊಂದಿಗೆ ಹೋರಾಡಲು ಪ್ರಾರಂಭಿಸಿದರು ಮತ್ತು ಅವರನ್ನು ಹಝ್ರತ್ ಪೈಗಂಬರ್(ಸ)ರಿಂದ ಬೇರ್ಪಡಿಸಿದರು. ಆಗ ಅವರೆಲ್ಲರೂ ಹಾರಿಸ್(ರ)ರ ಮೇಲೆ ಮುಗಿಬಿದ್ದರು. ಕೊನೆಗೆ ಅವರು ಶಹೀದ್ ಆದರು.

ಮಕ್ಕಾದ ಅವಿಶ್ವಾಸಿಗಳು ಮೂರು ವರ್ಷಗಳ ಕಾಲ ಹಝ್ರತ್ ಪೈಗಂಬರ್(ಸ)ರನ್ನು ಮತ್ತು ಅವರ ಕುಟುಂಬದವರನ್ನು ಅಬೂತಾಲಿಬ್‌ರ ಕಣಿವೆಯಲ್ಲಿ ಹೇಗೆ ಬಂಧಿಸಿಟ್ಟರೆಂದರೆ, ಅವರೊಂದಿಗೆ ಎಲ್ಲ ರೀತಿಯ ಸಾಮಾಜಿಕ ಬಹಿಷ್ಕಾರ ಮಾಡಲಾಯಿತು. ಈ ಬಹಿಷ್ಕಾರ ಕೊನೆಗೊಂಡ ನಂತರ, ಹಝ್ರತ್ ಪೈಗಂಬರ್(ಸ) ತೌಹೀದ್‌ನ ಪ್ರಚಾರವನ್ನು ಮೊದಲಿಗಿಂತಲೂ ಹೆಚ್ಚಾಗಿ ಮತ್ತು ವ್ಯಾಪಕವಾಗಿ ಮಾಡಲಾರಂಭಿಸಿದರು.

ಹಝ್ರತ್ ಪೈಗಂಬರ್(ಸ)ರ ತಾಯಿಫ್ ಪ್ರಯಾಣದ ಘಟನೆಯೂ ಪ್ರಸಿದ್ಧವಾಗಿದೆ. ಅಲ್ಲಿ ಅವರ ಮೇಲಾದ ದೌರ್ಜನ್ಯವನ್ನು ವಿವಿಧ ರೀತಿಯಲ್ಲಿ ಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಅಬೀತಾಲಿಬ್‌ರ ಕಣಿವೆಯಲ್ಲಿ ಬಂಧನಗೊಂಡಿದ್ದ ಅವಸ್ಥೆ ಕೊನೆಗೊಂಡಾಗ ಹಝ್ರತ್ ಪೈಗಂಬರ್(ಸ) ತಾಯಿಫ್‌ಗೆ ಹೋಗಿ ಅಲ್ಲಿನ ಜನರಿಗೆ ಇಸ್ಲಾಮಿನ ಸಂದೇಶ ನೀಡಲು ನಿರ್ಧರಿಸಿದರು. ಹಝ್ರತ್ ಪೈಗಂಬರ್(ಸ) ತಾಯಿಫ್‌ನಲ್ಲಿ ಹತ್ತು ದಿನಗಳ ಕಾಲ ತಂಗಿದರು ಮತ್ತು ನಗರದ ಅನೇಕ ಮುಖಂಡರನ್ನು ಪ್ರತ್ಯೇಕವಾಗಿ ಭೇಟಿಯಾದರು. ಆದರೆ ಆ ಸಮಯದಲ್ಲಿ ಮಕ್ಕಾದಂತೆಯೇ ಈ ನಗರವಾಸಿಗಳಿಗೂ ಇಸ್ಲಾಮ್ ಸ್ವೀಕಾರದ ಸೌಭಾಗ್ಯ ವಿಧಿಸಲ್ಪಟ್ಟಿರಲಿಲ್ಲ. ಕೊನೆಗೆ ಹಝ್ರತ್ ಪೈಗಂಬರ್(ಸ) ತಾಯಿಫ್‌ನ ಪ್ರಧಾನ ಮುಖಂಡನ ಬಳಿಗೆ ಹೋಗಿ ಇಸ್ಲಾಮಿನ ಸಂದೇಶವನ್ನು ತಲುಪಿಸಿದರು. ಆದರೆ ಆತ ಕೂಡ ಅದನ್ನು ಪೂರ್ಣವಾಗಿಯೂ ನಿರಾಕರಿಸುತ್ತಾ 'ನೀವು ಇಲ್ಲಿಂದ ಹೊರಟುಹೋಗುವುದು ಉತ್ತಮ' ಎಂದು ಹೇಳಿದನು. ಇದಾದ ನಂತರ ಆ ದುಷ್ಟನು ನಗರದ ಪೋಲಿ ಜನರನ್ನು ಹಝ್ರತ್ ಪೈಗಂಬರ್(ಸ)ರ ಹಿಂದೆ ಛೂಬಿಟ್ಟನು. ಆ ಜನರು ಬೊಬ್ಬೆ ಹಾಕುತ್ತಾ ಹಝ್ರತ್ ಪೈಗಂಬರ್(ಸ)ರನ್ನು ಹಿಂಬಾಲಿಸಿದರು ಮತ್ತು ಹಝ್ರತ್ ಪೈಗಂಬರ್(ಸ)ರ ಮೇಲೆ ಕಲ್ಲುಗಳನ್ನು ಎಸೆಯಲು ತೊಡಗಿದರು. ಇದರಿಂದ ಹಝ್ರತ್ ಪೈಗಂಬರ್(ಸ)ರ ಇಡೀ ದೇಹವು ರಕ್ತಸಿಕ್ತವಾಯಿತು. ತಾಯಿಫ್‌ನಿಂದ ಮೂರು ಮೈಲಿ ದೂರದಲ್ಲಿ ಮಕ್ಕಾದ ಮುಖಂಡ ಉತ್ಬಾ ಬಿನ್ ರಬೀಅ ಎಂಬಾತನ ತೋಟವಿತ್ತು. ಹಝ್ರತ್ ಪೈಗಂಬರ್(ಸ) ಅಲ್ಲಿ ಬಂದು ಆಶ್ರಯ ಪಡೆದರು. ಕ್ರೂರಿಗಳು ಸುಸ್ತಾಗಿ ಹಿಂದಿರುಗಿದರು. ಉತ್ಬಾ ತನ್ನ ಕ್ರೈಸ್ತ ಗುಲಾಮ 'ಅದ್ದಾಸ್' ಎಂಬಾತನ ಕೈಯಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಒಂದು ತಟ್ಟೆಯಲ್ಲಿ ದ್ರಾಕ್ಷಿಯನ್ನು ಕಳುಹಿಸಿದನು. ಹಝ್ರತ್ ಪೈಗಂಬರ್(ಸ) ಅದ್ದಾಸ್‌ನೊಡನೆ ಅವನ ಹೆಸರು ಮತ್ತು ಸ್ಥಳದ ಬಗ್ಗೆ ವಿಚಾರಿಸಿದರು. 'ನಾನು ನಿನೇವದವನು' ಎಂದು ಅವನು ಹೇಳಿದನು. ಹಝ್ರತ್ ಪೈಗಂಬರ್(ಸ) ಹೇಳಿದರು: 'ನಾನು ನಿಮ್ಮ ಊರಿಗೆ ಆಗಮಿಸಿದ್ದ ಪ್ರವಾದಿ ಯೂನುಸ್ ಬಿನ್ ಮತ್ತಾರ ಸಹೋದರನಾಗಿದ್ದೇನೆ.' ಸ್ವಲ್ಪ ಹೊತ್ತು ಹಝ್ರತ್ ಪೈಗಂಬರ್(ಸ) ಆ ತೋಟದಲ್ಲಿ ವಿಶ್ರಾಂತಿ ಪಡೆದು ಅಲ್ಲಿಂದ ಹೊರಟರು.

ಹಝ್ರತ್ ಪೈಗಂಬರ್(ಸ) ತೌಹೀದ್‌ನ ಸ್ಥಾಪನೆಗಾಗಿ ಮಕ್ಕಾದಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ತಬ್ಲೀಗ್ ಮಾಡುತ್ತಿದ್ದರು. ಅರೇಬಿಯಾದ ಮಾರುಕಟ್ಟೆಗಳಿಗೆ ಹೋಗುತ್ತಿದ್ದರು ಮತ್ತು ಅಲ್ಲಿ ಏಕನೂ ಸಹಭಾಗಿಯಿಲ್ಲದವನೂ ಆದ ದೇವನತ್ತ ಬರುವಂತೆ ಸಂದೇಶ ನೀಡುತ್ತಿದ್ದರು. ಮಕ್ಕಾದ ಹೊರಗೆ ವಿವಿಧ ಸ್ಥಳಗಳಲ್ಲಿ ಜನರು ಒಟ್ಟುಸೇರುತ್ತಿದ್ದರು. ಅವುಗಳನ್ನು **'ಅಸ್ವಾಕುಲ್ ಅರಬ್'** (ಅರೇಬಿಯಾದ ಮಾರುಕಟ್ಟೆಗಳು) ಎಂದು ಕರೆಯಲಾಗುತ್ತಿತ್ತು. ಅವುಗಳಲ್ಲಿ ಉಕಾಝ್, ಮಜನ್ನಾ ಮತ್ತು ಝುಲ್‌ಮಜಾಝ್ ಪ್ರಸಿದ್ಧ ಮಾರುಕಟ್ಟೆಗಳಾಗಿದ್ದವು. ಹಝ್ರತ್ ಜಾಬಿರ್(ರ)ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಹಜ್ ದಿನಗಳಲ್ಲಿ ಉಕಾಝ್ ಮತ್ತು ಮಜನ್ನಾದ ಜಾತ್ರೆಗಳಿಗೆ ಹೋಗುತ್ತಿದ್ದರು ಮತ್ತು ಜನರ ಮನೆಗಳಿಗೆ ಹಾಗೂ ತಂಗುದಾಣಗಳಿಗೆ ಹೋಗಿ ಇಸ್ಲಾಮಿನ ಸಂದೇಶ ಮುಟ್ಟಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: 'ನನಗೆ ಆಶ್ರಯ ನೀಡುವವರಾಗಿ ಯಾರಿದ್ದಾರೆ? ನಾನು ನನ್ನ ಪ್ರಭುವಿನ ಸಂದೇಶವನ್ನು ತಲುಪಿಸಲು ನನಗೆ ಯಾರು ಸಹಾಯ ಮಾಡುವರು?'

ಮಕ್ಕಾದ ಖುರೈಶಿಯರು ಒಂದೆಡೆ ಹಝ್ರತ್ ಪೈಗಂಬರ್(ಸ)ರನ್ನು ಇಸ್ಲಾಮಿನ ಪ್ರಚಾರ ಮಾಡದಂತೆ ತಡೆಯಲು ಯತ್ನಿಸುತ್ತಿದ್ದರು ಮತ್ತು ಇನ್ನೊಂದೆಡೆ ಇಸ್ಲಾಂ ಸ್ವೀಕರಿಸಿದವರ ಮೇಲೆ ದೌರ್ಜನ್ಯ ಮತ್ತು ಬರ್ಬರತೆ ತೋರಿಸುತ್ತಿದ್ದರು. ಅವರು ಎಷ್ಟು ಮೃಗೀಯವಾಗಿ ವರ್ತಿಸುತ್ತಿದ್ದರು ಎಂದರೆ, ಅದನ್ನು ವಿವರಿಸಲು ಕೂಡ ಸಾಧ್ಯವಲ್ಲ. ಹಝ್ರತ್ ಬಿಲಾಲ್(ರ)

ಸತ್ಯವಿಶ್ವಾಸವನ್ನು ಕೈಗೊಂಡಾಗ ಅವರ ಮಾಲೀಕ ಅವರನ್ನು ಹಿಡಿದು ನೆಲದ ಮೇಲೆ ಮಲಗಿಸಿದನು ಮತ್ತು ಅವರ ಮೇಲೆ ಸುಡುವ ಕಲ್ಲುಗಳನ್ನು ಮತ್ತು ಹಸುವಿನ ಚರ್ಮವನ್ನು ಹಾಕಿದನು ಹಾಗೂ 'ನಿನ್ನ ದೇವರು ಲಾತ್ ಮತ್ತು ಉಝ್ಝಾ' ಆಗಿರುವರು ಎಂದು ಹೇಳುತ್ತಿದ್ದನು. ಆದರೆ ಬಿಲಾಲ್[ರ] **'ಅಹದ್, ಅಹದ್'** (ದೇವನು ಒಬ್ಬನೇ) ಎಂದೇ ಹೇಳುತ್ತಿದ್ದರು. ಅನಂತರ ಹಝ್ರತ್ ಬಿಲಾಲ್[ರ]ರನ್ನು ಹಝ್ರತ್ ಅಬೂಬಕರ್[ರ] 280 ದಿರ್ಹಮ್‌ಗಳಿಗೆ ಖರೀದಿಸಿ ಸ್ವತಂತ್ರಗೊಳಿಸಿದರು.

ಮಕ್ಕಾದ ಖುರೈಶಿಯರು ಮುಸ್ಲಿಮರ ಮೇಲೆ ಮಾತ್ರ ದೌರ್ಜನ್ಯವೆಸಗುತ್ತಿರಲಿಲ್ಲ. ಬದಲಾಗಿ ಹಝ್ರತ್ ಪೈಗಂಬರ್[ಸ] ಕೂಡ ಯಾವುದೇ ರೀತಿಯಲ್ಲಿ ಸುರಕ್ಷಿತವಾಗಿರಲಿಲ್ಲ. ಎಲ್ಲರಿಗಿಂತ ಹೆಚ್ಚಿನ ಹಿಂಸೆ, ದುಃಖ ಮತ್ತು ಕಷ್ಟಗಳನ್ನು ಹಝ್ರತ್ ಪೈಗಂಬರ್[ಸ] ಎದುರಿಸಬೇಕಾಯಿತು. ಹಝ್ರತ್ ಪೈಗಂಬರ್[ಸ]ರ ಹೆಸರು 'ಮುಹಮ್ಮದ್' ಎಂದಾಗಿತ್ತು. ಈ ಹೆಸರನ್ನು ತಿರುಚಿ 'ಮುಝಮ್ಮಮ್' ಎಂದು ಕರೆಯಲಾಗುತ್ತಿತ್ತು, ಅಂದರೆ ಅತ್ಯಂತ ಹೆಚ್ಚು ನಿಂದನೆಗೆ ಒಳಗಾದವನು (ನಊಧುಬಿಲ್ಲಾಹ್). ಹಝ್ರತ್ ಪೈಗಂಬರ್[ಸ]ರನ್ನು ಕಧ್ಧಾಬ್ (ಮಹಾ ಸುಳ್ಳುಗಾರ) ಎಂದು ಕರೆಯಲಾಗುತ್ತಿತ್ತು, ವಂಚಕ, ದುರಾಸೆಯವನು ಮತ್ತು ಮೋಸಗಾರ ಎಂದೂ ಕರೆಯಲಾಗುತ್ತಿತ್ತು. ಅವರ ಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದರು ಮತ್ತು ಕೆಲವೊಮ್ಮೆ ಅವರ ಮೇಲೆ ಕೊಳಕನ್ನು ಎಸೆಯಲಾಗುತ್ತಿತ್ತು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: 'ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್[ಸ] (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಸಹ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ದೇವನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಹಿತಕಾಂಕ್ಷೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ಆದ್ದರಿಂದ, ಅವರ ಹೃದಯದ ರಹಸ್ಯ ತಿಳಿದಿದ್ದ ದೇವನು ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ ಅವರ ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು. ಪ್ರತಿಯೊಂದು ಅನುಗ್ರಹದ ಮೂಲ ಅವರೇ ಆಗಿದ್ದಾರೆ. ಅವರ ಅನುಗ್ರಹವನ್ನು ಒಪ್ಪಿಕೊಳ್ಳದೆ ತನಗೆ ಯಾವುದಾದರೂ ಶ್ರೇಷ್ಠತೆಯಿದೆ ಎಂದು ಹೇಳಿಕೊಳ್ಳುವವನು ಮನುಷ್ಯನಲ್ಲ, ಬದಲಾಗಿ ಸೈತಾನನ ಸಂತತಿಯಾಗಿದ್ದಾನೆ. ಏಕೆಂದರೆ ಪ್ರತಿಯೊಂದು ಶ್ರೇಷ್ಠತೆಯ ಕೀಲಿಯನ್ನು ಮತ್ತು ಪ್ರತಿಯೊಂದು ಜ್ಞಾನದ ಭಂಡಾರವನ್ನು ಅವರಿಗೆ ನೀಡಲಾಗಿದೆ. ಯಾರು ಅವರ ಮೂಲಕ ಪಡೆಯುವುದಿಲ್ಲವೋ, ಅವನು ಶಾಶ್ವತವಾಗಿ ವಂಚಿತನಾಗಿದ್ದಾನೆ. ನಾವೇನು? ನಮ್ಮ ವಾಸ್ತವತೆಯಾದರೂ ಏನು? ನಮಗೆ ನಿಜವಾದ ತೌಹೀದ್ ಇದೇ ಪ್ರವಾದಿಯ ಮೂಲಕ ಲಭಿಸಿದೆ ಎಂದೂ ಜೀವಂತ ದೇವನ ಪರಿಚಯ ಇದೇ ಪರಿಪೂರ್ಣ ಪ್ರವಾದಿಯ ಮೂಲಕ ಮತ್ತು ಅವರ ಪ್ರಕಾಶದಿಂದ ದೊರೆತಿದೆ ಎಂದೂ ಯಾವ ಮಾತುಕತೆ ಮತ್ತು ಸಂಭಾಷಣೆಯ ಮೂಲಕ ನಾವು ನೋಡುತ್ತಿರುವ ದೇವನ ಮುಖವನ್ನು ನಮಗೆ ಇದೇ ಹಿರಿಯ ಪ್ರವಾದಿಯ ಮೂಲಕ ಲಭ್ಯವಾಗಿದೆ ಎಂದೂ ನಾವು ಒಪ್ಪಿಕೊಳ್ಳದಿದ್ದರೆ ನಾವು ಕೃತಘ್ನರಾಗುವೆವು.'

'ಈ ಸನ್ಮಾರ್ಗದ ಸೂರ್ಯನ ಕಿರಣವು ಬಿಸಿಲಿನಂತೆ ನಮ್ಮ ಮೇಲೆ ಬೀಳುತ್ತದೆ ಮತ್ತು ನಾವು ಅದರ ಎದುರು ನಿಂತಿರುವವರೆಗೂ ಮಾತ್ರ ಪ್ರಕಾಶಮಾನವಾಗಿರಬಹುದು. ಹಝ್ರತ್ ಪೈಗಂಬರ್[ಸ]ರ ಮೇಲೆ ನಂಬಿಕೆ ಇಡದೆಯೇ ತೌಹೀದ್ ಮೇಲೆ ಸ್ಥಿರನಾಗಿದ್ದುಕೊಂಡು ದೇವನನ್ನು ಏಕನೂ ಪಾಲುದಾರನಿಲ್ಲದವನು ಎಂದು ಭಾವಿಸುವವನು ಕೂಡ ಮುಕ್ತಿ ಪಡೆಯುತ್ತಾನೆ ಹಾಗೂ ನಂಬಿಕೆ ಇರಿಸದೇ ಇರುವುದರಿಂದ ಅಥವಾ ಧರ್ಮಭ್ರಷ್ಟನಾಗುವುದರಿಂದ ಅವನಿಗೆ ಯಾವುದೇ ನಷ್ಟವಾಗುವುದಿಲ್ಲ ಎಂಬ ತಪ್ಪು ಕಲ್ಪನೆಗೆ ಅಂಟಿಕೊಂಡಿರುವವರು ತಿಳಿಯಬೇಕಾದ ಸಂಗತಿಯೇನೆಂದರೆ, ಮುಕ್ತಿಯು ಎರಡು ವಿಷಯಗಳ ಮೇಲೆ ನೆಲೆನಿಂತಿದೆ. ಒಂದು, ಸಂಪೂರ್ಣ ನಂಬಿಕೆಯೊಂದಿಗೆ ದೇವನ ಅಸ್ತಿತ್ವ ಮತ್ತು ಏಕತ್ವದ ಮೇಲೆ ವಿಶ್ವಾಸವಿಡುವುದು. ಎರಡನೆಯದಾಗಿ, ಅತ್ಯುನ್ನತನಾದ ಆ ಏಕದೇವನ ಪರಿಪೂರ್ಣ ಪ್ರೀತಿಯು ಅವನ ಹೃದಯದಲ್ಲಿ ಎಷ್ಟರಮಟ್ಟಿಗೆ ನೆಲೆಗೊಳ್ಳಬೇಕೆಂದರೆ, ಅದರ ಪ್ರಾಬಲ್ಯ ಮತ್ತು ಹಿಡಿತದ ಫಲವಾಗಿ ದೇವನ ವಿಧೇಯತೆಯೇ ಅವನ ಬದುಕಿನ ನೆಮ್ಮದಿಯಾಗಬೇಕು, ಅದಿಲ್ಲದೆ ಅವನು ಬದುಕಲು ಸಾಧ್ಯವಾಗದಿರಬೇಕು ಮತ್ತು ಆ ಪ್ರೀತಿಯು ಇತರ ಎಲ್ಲ ಪ್ರೀತಿಗಳನ್ನು ಕಿತ್ತುಹಾಕಬೇಕು ಮತ್ತು ಇಲ್ಲವಾಗಿಸಬೇಕು. ಇದೇ ನಿಜವಾದ ತೌಹೀದ್ ಆಗಿದೆ. ಇದು ನಮ್ಮ ಸರದಾರ ಮತ್ತು ನಾಯಕರಾದ ಹಝ್ರತ್ ಪೈಗಂಬರ್[ಸ]ರ ಅನುಸರಣೆಯಿಲ್ಲದೆ ಲಭ್ಯವಾಗಲು ಸಾಧ್ಯವೇ ಇಲ್ಲ. ಲಭ್ಯವಾಗಲು ಏಕೆ ಸಾಧ್ಯವಿಲ್ಲ ಎಂಬುದಕ್ಕೆ ಉತ್ತರವೇನೆಂದರೆ, ದೇವನ ಅಸ್ತಿತ್ವವು ಅಗೋಚರಗಳಲ್ಲಿ ಅಗೋಚರ ಹಾಗೂ ಅತೀಂದ್ರಿಯ ಮತ್ತು ಅತ್ಯಂತ ರಹಸ್ಯವಾಗಿ ಇದೆ. ಅದನ್ನು ಮಾನವನ ಬುದ್ಧಿಶಕ್ತಿಯು ಕೇವಲ ತನ್ನ ಬಲದಿಂದ ಅರಿಯಲು ಸಾಧ್ಯವಿಲ್ಲ ಮತ್ತು ಯಾವುದೇ ಬೌದ್ಧಿಕ

ಪುರಾವೆಯು ಅವನ ಅಸ್ತಿತ್ವದ ಬಗ್ಗೆ ಖಚಿತವಾದ ಸಾಕ್ಷಿಯಾಗಲಾರದು. ಏಕೆಂದರೆ ಈ ಪ್ರಪಂಚ ರಚನೆಗಳನ್ನು ನೋಡಿ ಸೃಷ್ಟಿಕರ್ತನ ಅಗತ್ಯವನ್ನು ಅನುಭವಿಸುವ ಮಿತಿಗೆ ಮಾತ್ರ ಬುದ್ಧಿಯ ಓಟ ಮತ್ತು ಪ್ರಯತ್ನವು ಸೀಮಿತವಾಗಿದೆ. ಆದರೆ ಅಗತ್ಯವೆಂದು ಭಾವಿಸುವುದು ಬೇರೆಯೇ ಸಂಗತಿಯಾಗಿದೆ ಮತ್ತು ಯಾವ ದೇವನ ಅಗತ್ಯವನ್ನು ಒಪ್ಪಿಕೊಳ್ಳಲಾಗಿದೆಯೋ ಅವನು ವಾಸ್ತವದಲ್ಲಿ ಅಸ್ತಿತ್ವದಲ್ಲಿದ್ದಾನೆ ಎಂದು ಕಣ್ಣಾರೆ ಕಂಡಂತಹ ಖಚಿತತೆಯ ಹಂತವನ್ನು ತಲುಪುವುದು ಬೇರೆಯೇ ವಿಷಯವಾಗಿದೆ. ಆದ್ದರಿಂದ ಖಚಿತವಾದ ತೌಹೀದ್ ಹಝ್ರತ್ ಪೈಗಂಬರ್(ಸ)ರ ಮೂಲಕ ಮಾತ್ರವೇ ಲಭಿಸಲು ಸಾಧ್ಯ ಎಂದು ದೃಢವಾಗಿ ನಂಬಿರಿ... ಆದ್ದರಿಂದ ನಾವು ಹಝ್ರತ್ ಪೈಗಂಬರ್(ಸ)ರೊಂದಿಗೆ ನಿಜವಾದ ಪ್ರೇಮ ಹೊಂದಿರಬೇಕು. ಈ ಕಾಲದಲ್ಲಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರ ಸತ್ಯಸಂಧ ಸೇವಕನನ್ನು ತೌಹೀದ್‌ನ ಸ್ಥಾಪನೆಗಾಗಿ ಕಳುಹಿಸಿದ್ದಾನೆ ಮತ್ತು ನಾವು ಅವರ ಬೈಅತ್ ಮಾಡಿದ್ದೇವೆ. ಆದ್ದರಿಂದ ನಾವು ಅದರ ಹಕ್ಕನ್ನು ಪೂರೈಸಲು ಪೂರ್ಣವಾದ ಪ್ರಯತ್ನವನ್ನು ಮಾಡಬೇಕು. ವಿಶೇಷವಾಗಿ ರಮಝಾನ್ ದಿನಗಳಲ್ಲಿ ನಾವು ತೌಹೀದ್‌ನ ಸ್ಥಾಪನೆಗಾಗಿ ಎಲ್ಲರಿಗಿಂತ ಮುಂದಿರಬೇಕು ಎಂದು ದುಆ ಮಾಡಬೇಕು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ. ಮುಸ್ಲಿಂ ಉಮ್ಮತ್‌ಗಾಗಿಯೂ ದುಆ ಮಾಡಿರಿ. ಅವರು ಸಹ ನಿಜವಾದ ತೌಹೀದನ್ನು ಮನವರಿಕೆ ಮಾಡುವವರೂ ಅದನ್ನು ಪಾಲಿಸುವವರೂ ಆಗಲಿ.

(ಖುತ್ಬದ ಕೊನೆಯಲ್ಲಿ ಹುಝೂರ್ ಇತ್ತೀಚೆಗೆ ನಿಧನರಾದ ನೈಜೀರಿಯಾದ ಮುಬಲ್ಲಿಗ್ ಆಗಿದ್ದ ಸನ್ಮಾನ್ಯ ಝಿಕ್ರುಲ್ಲಾ ತಾಯೋ ಅಯೂಬ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗಾಇಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.)

—————————*****—————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis**(atba)*

At, ***'Masjid Mubarak',*** *Islamabad, Tilford,* U.K. On 13-03-2026

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim | ***Layout**:* Basheer K.P. Manjeshwar

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon